ಮಾರಕವೆನಿಸಿದ್ದ ಡಬ್ಬಿಂಗ್ ವಿರೋಧಿ ಚಳವಳಿ, ಕನ್ನಡ ಚಲನಚಿತ್ರ ಪ್ರೇಮಿಗಳು ಕನ್ನಡ ಚಿತ್ರಗಳ ಪರ ಮೂಡಿಸಿದ ಅಭಿಮಾನ, 1961ರ ರಾಜ್ಯ ಕಂಡ ಭೀಕರ ಪ್ರವಾಹದ ಸಮಯದಲ್ಲಿ ಸಂಕಷ್ಟದಲ್ಲಿದ್ದ ಜನತೆಗೆ ಸಾಂತ್ವನ ಹೇಳಿ, ಬೀದಿಗಿಳಿದು ಹಣ ಸಂಗ್ರಹಿಸಿ ಸಹಾಯಕ್ಕೆ ಧಾವಿಸಿದ ಕಲಾವಿದರು–ತಂತ್ರಜ್ಞರ ಮಾನವೀಯ ಅನುಕಂಪ ಜನಸಮುದಾಯ ಮತ್ತು ಚಲನಚಿತ್ರರಂಗದ ನಡುವೆ ಗಾಢವಾದ ಬೆಸುಗೆ ಹಾಕಿತು. ಸರ್ಕಾರ ಜಾರಿಗೆ ತಂದ ಸಬ್ಸಿಡಿ ಮತ್ತು ಉತ್ತಮ ಚಿತ್ರಗಳಿಗೆ ಪ್ರಶಸ್ತಿ ಯೋಜನೆ – ಈ ಎಲ್ಲ ಪ್ರಯತ್ನಗಳು ಒಟ್ಟಾರೆ ಕನ್ನಡ ಸಿನಿಮಾ ಮಾಧ್ಯಮವನ್ನು ಕರ್ನಾಟಕ ಸಂಸ್ಕೃತಿಯ ಭಾಗವನ್ನಾಗಿ ಕ್ರಮೇಣ ರೂಪಿಸಿದವು. ಕನ್ನಡ ಚಿತ್ರೋದ್ಯಮದಲ್ಲಾದ ಈ ಪರಿವರ್ತನೆಯು ಕನ್ನಡ ಚಿತ್ರರಂಗದ ಅಸ್ಮಿತೆಯೊಂದರ ಹುಡುಕಾಟಕ್ಕೆ ನೆರವಾಯಿತು.



ಎಪ್ಪತ್ತರ ದಶಕದಲ್ಲಿ ಕನ್ನಡ ಚಲನಚಿತ್ರರಂಗ ಒಂದೇ ಬಾರಿಗೆ ಹಲವು ಆಯಾಮಗಳಲ್ಲಿ ಬೆಳೆದು ಇಡೀ ಭಾರತೀಯ ಚಿತ್ರೋದ್ಯಮದ ಗಮನ ಸೆಳೆಯಿತು. 1970ರಲ್ಲಿ ತೆರೆಕಂಡ 'ಸಂಸ್ಕಾರ' ಚಿತ್ರವು ಅಕ್ಷರಶಃ ಬಿರುಗಾಳಿಯೆಬ್ಬಿಸಿತು. ಒಂದು ಕಡೆ ಸಂಪ್ರದಾಯಸ್ಥರ ಕೆಂಗಣ್ಣಿಗೆ ಗುರಿಯಾದ ಚಿತ್ರವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದು ಹೊಸ ಅಲೆ ಅಥವಾ ಪ್ರಯೋಗಾತ್ಮಕ ಚಿತ್ರಗಳ ಪಂಥವೊಂದಕ್ಕೆ ನಾಂದಿ ಹಾಡಿತು. ಅದು ಮೂಡಿಸಿದ ಸಂಚಲನ ಅನುಪಮ. ರಂಗಭೂಮಿ, ಸಾಹಿತ್ಯ, ಪತ್ರಿಕೋದ್ಯಮ, ಎಂಜಿನಿಯರಿಂಗ್ – ಹೀಗೆ ಭಿನ್ನ ಕ್ಷೇತ್ರಗಳ ಪ್ರತಿಭಾವಂತರು ಚಿತ್ರರಂಗದಲ್ಲಿ ಪ್ರಯೋಗ ನಡೆಸಿದರು. ಚಲನಚಿತ್ರವನ್ನು ಶೈಕ್ಷಣಿಕವಾಗಿ ಅಭ್ಯಾಸ ಮಾಡಿ ತರಬೇತು ಪಡೆದು ಬಂದ ಗಿರೀಶ ಕಾಸರವಳ್ಳಿಯವರ ವೃತ್ತಿಬದುಕು 'ಘಟಶ್ರಾದ್ಧ'ದ ಮೂಲಕ ಉಜ್ವಲವಾಗಿ ಆರಂಭವಾದದ್ದು ಇದೇ ಸಮಯದಲ್ಲಿ.

ಚಿತ್ರದ ವಸ್ತು, ನಿರೂಪಣೆ ಮತ್ತು ಇತರ ತಾಂತ್ರಿಕ ಕ್ಷೇತ್ರಗಳಲ್ಲಿ ಗಮನಾರ್ಹ ಬದಲಾವಣೆಗಳು ಮೂಡಿಬಂದದ್ದು ಈ ದಶಕದಲ್ಲಿ. ರಂಜನೆ ಮತ್ತು ನೀತಿಕಥೆಗಳನ್ನು ತ್ಯಜಿಸಿದ ಹೊಸ ಅಲೆಯ ಚಿತ್ರಗಳು ತಮ್ಮ ಸುತ್ತಲಿನ ವಾಸ್ತವ ಪ್ರಪಂಚಕ್ಕೆ ಕನ್ನಡಿ ಹಿಡಿದವು. ಹಾಗಾಗಿ ಅದುವರೆವಿಗೂ ಕನ್ನಡ ಪ್ರೇಕ್ಷಕರಿಗೆ ಅಪರಿಚಿತವಾದ, ವೈಚಾರಿಕವಾಗಿ ಗಟ್ಟಿಯಾದ ಕಥೆಗಳು ಕನ್ನಡದ ತೆರೆಯ ಮೇಲೆ ಬಂದವು. ಮುಖ್ಯವಾಗಿ ಗಟ್ಟಿಯಾದ ಮಹಿಳಾ ಪಾತ್ರಗಳು ರೂಪುಗೊಂಡಿದ್ದು ಈ ಹಂತದಲ್ಲಿಯೇ. ಪ್ರತಿಭಾವಂತ ಕಲಾವಿದರು ಮತ್ತು ತಂತ್ರಜ್ಞರ ಮಹಾಸ್ಫೋಟವೇ ಈ ದಶಕದಲ್ಲಾಯಿತು. ಅದರಲ್ಲೂ ಕಲಾವಿದರು ಮತ್ತು ನಿರ್ದೇಶಕರ ಆಗಮನ ದೊಡ್ಡ ಮಟ್ಟದಲ್ಲಾಯಿತು. ಮುಂದಿನ ಎರಡು ದಶಕಗಳಾಚೆಗೂ ಈ ಪ್ರತಿಭಾ ಸ್ಫೋಟದ ಪ್ರಭಾವ ಮುಂದುವರೆಯಿತು. ಕಲಾವಿದರ ಅಭಿನಯದಲ್ಲಿ ಅಸಾಧಾರಣ ಬದಲಾವಣೆ ಕಂಡಿತು. ಅನಂತನಾಗ್, ಲೋಕೇಶ್, ಎಂ.ವಿ. ವಾಸುದೇವ ರಾವ್, ಲೋಕನಾಥ್, ಎಲ್.ವಿ. ಶಾರದಾ, ವೆಂಕಟರಾವ್ ತಲಗೇರಿ ಮೊದಲಾದವರು ವಿಭಿನ್ನ ಅಭಿನಯ ಪಂಥವೊಂದನ್ನು ರೂಪಿಸಿದರು.

ಹೊಸಬಗೆಯ ಪ್ರಯೋಗಗಳನ್ನು ಕೈಗೊಳ್ಳಲು ಕನ್ನಡ ಚಿತ್ರರಂಗ ಒಂದು 'ಕನ್ನೆ ನೆಲ' ಎಂದು ಬಲವಾಗಿ ನಂಬಿ ಬಾಲು ಮಹೇಂದ್ರ (ಕೋಕಿಲಾ) ಮತ್ತು ಮಣಿರತ್ನಂ (ಪಲ್ಲವಿ ಅನುಪಲ್ಲವಿ) ಅವರು ತಮ್ಮ ವೃತ್ತಿಬದುಕಿನ ಮೊದಲ ಪ್ರಯತ್ನಗಳನ್ನು ಕನ್ನಡದಲ್ಲಿಯೇ ಮಾಡಿ ಯಶಸ್ಸು ಕಂಡರು. ಕೆ. ಬಾಲಚಂದರ್ ಮತ್ತು ಶ್ರೀಧರ್ ಅವರಂಥ ಯಶಸ್ವಿ ನಿರ್ದೇಶಕರು ತಮ್ಮ ಹೊಸ ಪ್ರಯೋಗಗಳಿಗೆ ಕನ್ನಡ ನೆಲವನ್ನೇ ಹುಡುಕಿ ಬಂದರು. ಅಮರೇಶ್ ಪುರಿ, ನಾಸಿರುದ್ದೀನ್ ಷಾ, ಅನಿಲ್ ಕಪೂರ್, ಸ್ಮಿತಾ ಪಾಟೀಲ್, ಶಬಾನಾ ಆಜ್ಮಿ, ಅಮೋಲ್ ಪಾಲೇಕರ್, ಪಲ್ಲವಿ ಜೋಷಿ, ದೀಪ್ತಿ ನವಲ್, ಲಕ್ಷ್ಮಿ ಕೃಷ್ಣಮೂರ್ತಿಯಂಥ ಕಲಾವಿದರು, ಇಷಾನ್ ಆರ್ಯ, ಗೋವಿಂದ ನಿಹಲಾನಿ, ಎ.ಕೆ. ಬೀರ್, ಮಧು ಅಂಬಟ್ ಮುಂತಾದ ತಂತ್ರಜ್ಞರು ನಮ್ಮ ಚಿತ್ರಗಳಲ್ಲಿ ಅಭಿಮಾನದಿಂದ ಭಾಗವಹಿಸಿದರು. ಅಷ್ಟೇ ಅಲ್ಲ, ಮುಖ್ಯವಾಹಿನಿಯ ಚಿತ್ರಗಳ ನಿರ್ದೇಶಕರುಗಳಾದ ಪುಟ್ಟಣ್ಣ, ಸಿದ್ದಲಿಂಗಯ್ಯ, ಜಿ.ವಿ. ಅಯ್ಯರ್ ಅವರು 'ಕಥಾಸಂಗಮ', 'ಬೂತಯ್ಯನ ಮಗ ಅಯ್ಯು', 'ಹೇಮಾವತಿ', 'ಹಂಸಗೀತೆ'ಯಂತಹ ಉತ್ಕೃಷ್ಟ ಚಿತ್ರಗಳನ್ನು ನಿರ್ಮಿಸಿದ ಸಾಹಸದ ಹಿಂದೆ ಹೊಸ ಅಲೆಯ ಚಿತ್ರನಿರ್ಮಾಣ ಮತ್ತು ನಿರೂಪಣಾ ಕ್ರಮದ ಪ್ರಭಾವ ಖಂಡಿತಾ ಇದೆ.

ಈಗ ಹೊಸ ಅಲೆಯ ಚಿತ್ರಗಳ ಅಥವಾ ಎಪ್ಪತ್ತರ ದಶಕದ ಪ್ರಯೋಗಗಳು ಕ್ಷೀಣಿಸಿವೆ ಎಂದು ಭಾವಿಸಿದರೂ ಆ ದಶಕವು ಮೂಡಿಸಿದ ಸಂಚಲನದ ಪ್ರಭಾವ ಕನ್ನಡ ಚಿತ್ರರಂಗ ಹೊರಳು ಹಾದಿ ಹಿಡಿಯಲು ಕಾರಣವಾದದ್ದು ನಿಜ. ■

---



ಅಣುಸ್ಥಾವರ ವಿರೋಧಿ ಚಳವಳಿ, ಕುದುರೆಮುಖ ಸಂರಕ್ಷಣೆಯ ಚಳವಳಿ ಸೇರಿದವು. 'ಪಶ್ಚಿಮಘಟ್ಟ ಉಳಿಸಿ' ಆಂದೋಲನದಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದು ಕರ್ನಾಟಕ.

ಇದಕ್ಕೆ ವಿರೋಧಾಭಾಸದ ಸಂಗತಿಗಳು ಜೊತೆಜೊತೆಗೇ ಬಂದವು. ಈ ಐವತ್ತು ವರ್ಷಗಳಲ್ಲಿ ಅತಿ ವೇಗವಾಗಿ ಹೆಚ್ಚಿದ ಜನಸಂಖ್ಯೆ ನೈಸರ್ಗಿಕ ಸಂಪನ್ಮೂಲಗಳಿಗೆ ಕೊಡಲಿ ಪೆಟ್ಟು ನೀಡಿತು. 80ರ ದಶಕದ ನಂತರ, ವಿಶೇಷವಾಗಿ ಜಾಗತೀಕರಣದ ನಂತರ ಜನರ ಆಶೋತ್ತರಗಳು, ಬೇಡಿಕೆಗಳು ಹೆಚ್ಚಾದವು. 90ರ ದಶಕದ ನಂತರ ಖಾಸಗಿ ಕ್ಷೇತ್ರ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿತು. ವಿದ್ಯುತ್ ಸ್ಥಾವರ, ಹೈವೇ ಪ್ರಾಜೆಕ್ಟ್, ಕಾರ್ಖಾನೆಗಳು ಒಂದರ ನಂತರ ಒಂದರಂತೆ ದಾಂಗುಡಿ ಇಡಲು ಆರಂಭಿಸಿದವು.

ಆನಂತರ, ಅಭಿವೃದ್ಧಿ ಆಗಬೇಕೆಂದರೆ ಪರಿಸರ ನಾಶ ಆಗಲೇಬೇಕೆಂಬ ಭಾವ ನಮ್ಮ ಆಡಳಿತದಲ್ಲಿ, ಅವುಗಳ ನೀತಿಗಳಲ್ಲಿ ಪರೋಕ್ಷವಾಗಿ ಕಂಡುಬಂತು. ಆರ್ಥಿಕ ಅಭಿವೃದ್ಧಿಯೇ ಬಹಳ ಮುಖ್ಯ ಎಂದೆನಿಸಿ ಪರಿಸರಕ್ಕೆ ಸಂಬಂಧಿಸಿದ ಕಾನೂನುಗಳನ್ನು ಜನಸಾಮಾನ್ಯರು ಎರಡನೇ ಆದ್ಯತೆಯಾಗಿಸಿಕೊಳ್ಳುವ ಪರಿಪಾಟ ಕಂಡುಬಂತು. ಜಾಗತೀಕರಣದೊಂದಿಗೆ ಜನಪರ ಚಳವಳಿಗಳೂ ದನಿ ಕಳೆದುಕೊಂಡವು. ಕಳೆದ 10 ವರ್ಷಗಳನ್ನೊಮ್ಮೆ ಹಿಂತಿರುಗಿ ನೋಡಿದರೆ, ಅಲ್ಲಲ್ಲಿ ಸ್ಥಳೀಯವಾಗಿ ಹೊರತುಪಡಿಸಿ ಪರಿಸರಕ್ಕಾಗಿ ವ್ಯಾಪಕ ಚಳವಳಿ ಆಗಿದ್ದು ಕಾಣುವುದೇ ಇಲ್ಲ.

ಇಷ್ಟು ವರ್ಷಗಳಲ್ಲಿ ನಮ್ಮ ವಿಶ್ವವಿದ್ಯಾಲಯಗಳಲ್ಲಿ, ಸಂಶೋಧನಾ ಸಂಸ್ಥೆಗಳಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಮಹತ್ವದ ಸಂಶೋಧನೆಗಳಾಗಿವೆ, ಸ್ಥಾಪಿತ ಮಾಹಿತಿ ಇದೆ. ಆದರೆ ಅವು ಬೌದ್ಧಿಕ ಮಟ್ಟದ ಚಟುವಟಿಕೆಯಾಗಿ ಉಳಿಯುತ್ತಿವೆಯೇ ಹೊರತು ದಿನನಿತ್ಯದ ಜೀವನದಲ್ಲಿ ಅನುಷ್ಠಾನವಾಗುತ್ತಿಲ್ಲ.

ಕರ್ನಾಟಕ ಜಗತ್ತಿಗೇ ಪರಿಸರ ಪಾಠ ಹೇಳಿದೆ. ಇಲ್ಲಿನ ಚಳವಳಿಗಳು ದೇಶಕ್ಕೆ, ಸಮುದಾಯ ಕಾಳಜಿಯ ಮಹತ್ವವನ್ನೂ ತಿಳಿಸಿದೆ. ಜೀವವೈವಿಧ್ಯ ಕಾನೂನು ಬರುವಲ್ಲಿ ಸಂಘಟನೆಗಳು, ವಿಜ್ಞಾನಿಗಳ ಪ್ರಯತ್ನವನ್ನು ಶ್ಲಾಘಿಸಲೇಬೇಕು. ಕರ್ನಾಟಕದಲ್ಲಿ ಕೆರೆಗಳ ಪುನರುಜ್ಜೀವನ, ಪರಿಸರಸ್ನೇಹಿ ಕೃಷಿಯ ಹಲವು ಯಶೋಗಾಥೆಗಳು ಇಲ್ಲಿ ಸಿಗುತ್ತವೆ. ಸೌರವಿದ್ಯುತ್ ಹಾಗೂ ಜೈವಿಕ ಇಂಧನ ಬಳಕೆಯಲ್ಲೂ ಕರ್ನಾಟಕ ಮುಂಚೂಣಿಯಲ್ಲಿದೆ. ಆದರೆ ಇಷ್ಟಕ್ಕೆ ತೃಪ್ತಿಗೊಳ್ಳುವ ಪರಿಸ್ಥಿತಿಯಲ್ಲಿಲ್ಲ ಎಂಬುದು ಸತ್ಯ.

ಇಂದಿನ ಹವಾಮಾನ ಬದಲಾವಣೆ ಸಂದರ್ಭ, ಪರಿಸರ ನಾಶದ ವೇಗಕ್ಕೆ ನಮ್ಮ ಪ್ರಯತ್ನಗಳು ಕಡಿಮೆ ಎನ್ನಬಹುದು. ನಮ್ಮ ನೆಲ, ಜಲ, ಪರಿಸರದ ರಕ್ಷಣೆ ಒಟ್ಟಾಗಿ ನಾಡು ಕಾರ್ಯಪ್ರವೃತ್ತರಾಗುವ ಕಾಲಘಟ್ಟ ಇಂದಿನದ್ದಾಗಿದೆ. ■